ನಡುವೆಯೂ ಅಲ್ಲಿಂದ ಹೊರಬೀಳುವಾಗ ನನ್ನಲ್ಲೊಂದು ಅವ್ಯಕ್ತ ಹಮ್ಮಿನ ಸುಖಾನುಭವವಿತ್ತಾ? ನನಗೇ ಸಂಶಯವಾಯಿತು.'ನಾನು ಅಷ್ಟೊಂದು ದೊಡ್ಡ ಸೀನ್ ಕ್ರಿಯೇಟ್ ಮಾಡುವ ಅವಶ್ಯಕತೆಯಿರಲಿಲ್ಲ, ತುಂಬಾ ಚೀಪ್ ಆದೆ' ಎನ್ನಿಸಿ ಬೇಸರವಾಯಿತು. ಅದೆಲ್ಲದರ ಜೊತೆಗೆ, ನಾನು ಆರಿಸಿದ ಆ ಹುಡುಗಿ ಮತ್ತೆ ಮತ್ತೆ ಕಣ್ಣ ಮುಂದೆ ಬರುತ್ತಿದ್ದಳು. ವಾಪಸ್ಸು ಹೋದ ಮೋ ಆ ಹುಡುಗಿಯೊಡನೆಯೇ ರಾತ್ರಿಯನ್ನು ಕಳೆದಿರಬಹುದೇ ಎಂದು ಯೋಚಿಸಿ ವಿಚಿತ್ರ ಸಂಕಟವಾಯಿತು.

ಅವನ ಮಟ್ಟಿಗೆ ಶುದ್ಧ ಗಮಾರನಾದ ನನ್ನ ತಂಟೆಗೆ ಆತ ಇನ್ನು ಬರಲಿಕ್ಕಿಲ್ಲವೆಂದುಕೊಂಡಿದ್ದೆ. ಆದರೆ ಬೆಳಿಗ್ಗೆ ತಿಂಡಿಯ ಹೊತ್ತಿಗೇ ರೂಮಿನ ಬಾಗಿಲಲ್ಲಿ ಹಾಜರಾದ. 'ವದ್ದಾss...' ಎನ್ನುತ್ತ ನನ್ನನ್ನು ಬಿಗಿದಪ್ಪಿದ. ಮತ್ತೆ ಕೊಸರಿಕೊಳ್ಳುವಂತಾಯ್ತು. ಬೇರೆಲ್ಲಿಗಾದರೂ ತಿಂಡಿಗೆ ಹೋಗೋಣವೆಂದ. ನಾನು ಇಲ್ಲೇ ಮಾಡೋಣವೆಂದೆ. ನಿನ್ನೆ ರಾತ್ರಿ ನಡೆದ ಘಟನೆಯ ಬಗ್ಗೆ ಅವನಿಗೆ ಯಾವುದೇ ಪಶ್ಚಾತಾಪವಿದ್ದಂತೆ ಕಾಣಲಿಲ್ಲ. ಆ ವಿಷಯವನ್ನು ಇಬ್ಬರೂ ಎತ್ತಲಿಲ್ಲ. ತಿಂಡಿ ತಿನ್ನುತ್ತಾ ನನ್ನ ಆ ದಿನದ ಯೋಜನೆಯ ಬಗ್ಗೆ ವಿಚಾರಿಸಿದ. ನಾನು ಬೆಂಗಳೂರಿಗೆ ರೈಲಿನಲ್ಲಿ ವಾಪಸ್ಸು ಹೋಗುತ್ತಿದ್ದೇನೆ ಎಂಬುದನ್ನು ತಿಳಿದು, ಟ್ರೇನ್ ಟಿಕೇಟು ಬಿಸಾಡುವಂತೆಯೂ ವಿಮಾನದ ಟಿಕೆಟ್ ಆತನ ಕಂಪೆನಿಯ ವತಿಯಿಂದ ಬುಕ್ ಮಾಡುವುದಾಗಿಯೂ ತಿಳಿಸಿದ. ನಾನೆಷ್ಟೇ ಬೇಡವೆಂದು ಅಲವತ್ತುಕೊಂಡರೂ 'ಅಷ್ಟಿದ್ದರೆ, ಫ್ಲೈಟಿನಲ್ಲಿ ಹಿಂದಿರುಗಿದ್ದು ಮತ್ಯಾರಿಗೂ ಹೇಳಬೇಡ ಮಾರಾಯ. ನನಗೆ ನಿನಗೆ ಬಿಟ್ಟರೆ ಮತ್ಯಾರಿಗೆ ಗೊತ್ತಾದೀತು?... ಹೆಚ್ಚೆಂದರೆ ವಿಮಾನದಲ್ಲಿರುವ ಸೆಕ್ಸಿ ಗಗನಸಖಿಗೆ ಗೊತ್ತಾಗಬಹುದು ಅಷ್ಟೇ...' ಎಂದು ಕಣ್ಣು ಮಿಟುಕಿಸುತ್ತ ಯಾರಿಗೋ ಫೋನ್ ಮಾಡಿ ಟಿಕೆಟ್ ವ್ಯವಸ್ಥೆ ಮಾಡಿಯೂ ಬಿಟ್ಟ. ಉಳಿದರ್ಧ ದಿನವನ್ನು ಪ್ರದರ್ಶನ ಮಳಿಗೆಯಲ್ಲೇ ಅಲ್ಲಲ್ಲಿ ಸುತ್ತಾಡಿ ಒಟ್ಟಿಗೇ ಕಳೆದು, ನಂತರ ಆತನೇ ಏರ್‌ಪೋರ್ಟಿಗೆ ಬಂದು ಬೆಂಗಳೂರಿನಲ್ಲಿ ಸಿಗೋಣ ಅನ್ನುತ್ತ ನಾನು ಕೊಸರಿಕೊಳ್ಳಲೂ ಆಗದಂತೆ ಬಿಗಿದಪ್ಪಿ ಬೀಳ್ಕೊಟ್ಟ.

ಮೊದಲ ವಿಮಾನ ಪ್ರಯಾಣ ನಂದು. ಚೆಕ್‌ಇನ್ ಕೌಂಟರಿನ ತರುಣಿ ಎರಡೆರಡು ಬಾರಿ ಅದೇನೋ 'ಅಸ್ಲೆಲು ಅಸ್ಲೆಲೂ' ಎಂದು ಕೇಳಿದರೂ ನನಗೆ ಅರ್ಥವೇ ಆಗಲಿಲ್ಲ. ಉತ್ತರಿಸಲಾಗದೇ ನಾನು ಪೆಚ್ಚಾದೆ. ನಂತರ ಆಕೆಯೇ 'ಓಕೆ. ಐ ವಿಲ್ ಗಿವ್ ಯು ವಿಂಡೋ ಸೀಟ್' ಅನ್ನುತ್ತ ಬೋರ್ಡಿಂಗ್ ಪಾಸು ಕೈಗಿತ್ತಳು. ಮೊದಲೇ, ಯಾರು ಏನು ಕೇಳುತ್ತಾರೋ ಎಲ್ಲಿ ಏನು ಮಾಡಬೇಕೋ ಎಂಬ ಆತಂಕ ನನಗೆ. ಸಾಲದೆಂಬಂತೆ ಈ ಫಳಫಳಿಸುವ ಫ್ಲೋರಿಂಗ್ ಬೇರೆ! ದುರದೃಷ್ಟವಶಾತ್ ನನ್ನ ಅಂಗಿಯ ಬಲಗೈ ತೋಳಿನ ತುದಿಯ ಬಟನ್ ಅಂದೇ ತುಂಡಾಗಬೇಕಿತ್ತೇ? ಕೈ ಮುಂದೂಡುವ ಪ್ರಸಂಗ ಬಂದಾಗಲೆಲ್ಲ ಗುಂಡಿಯ ಉಳಿದರ್ಧ ಮಾತ್ರ ಕಾಜಾದೊಳಕ್ಕೆ ಸಿಲುಕಿರುವುದನ್ನು ಯಾರೂ ಗಮನಿಸದಂತೆ ಕಾಳಜಿವಹಿಸುವುದರಲ್ಲೇ ನನಗೆ ಸಾಕುಬೇಕಾಗಿ ಹೋಯಿತು.

★★★

ಆ ದಿನ ಯೋಜನೆಗಿಂತ ಮೊದಲೇ ಮುಂಬಯಿಯಿಂದ ಹಿಂತಿರುಗಿದ್ದೆನಾದ್ದರಿಂದ ಸಂಜೆ ಮನೆಯಲ್ಲೇ ಇದ್ದೆ.

'ಡ್ಯೆಡೀ.'

'.....'